## ವರ್ಕ್ ಫ್ರಂ ಹೋಮ್!

ಒಂದು ಎತ್ತು ಗಾಡಿಯನ್ನೆಳೆದುಕೊಂಡು ಹೋಗುವುದನ್ನೂ ಅದರೊಳಗೆ ರೈತ ನೆಮ್ಮದಿಯಿಂದ ಮಲಗಿರುವುದನ್ನೂ ಗಮನಿಸಿದ ಸಾಫ್ಟ್‌ವೇರ್ ಎಂಜಿನಿಯರ್ ಗೋಪಿ ಅಚ್ಚರಿಯಿಂದ ರೈತನನ್ನೆಬ್ಬಿಸಿ ಪ್ರಶ್ನಿಸಿದ, 'ಒಂದೊಮ್ಮೆ ಎತ್ತು ಹಾಗೇ ನಿಂತು ಬಿಟ್ಟರೆ ಹೇಗೆ ಗೊತ್ತಾಗುತ್ತೆ?' 'ಎತ್ತು ನಡೆಯುವುದನ್ನು ನಿಲ್ಲಿಸಿದರೆ ಅದರ ಕೊರಳಲ್ಲಿ ಘಂಟೆ ಬಾರಿಸುವುದು ನಿಲ್ಲುತ್ತದೆ. ಆ ಶಬ್ದ ಕೇಳದಿದ್ದರೆ ನನಗೆ ಎಚ್ಚರವಾಗುತ್ತದೆ' ಎಂದುತ್ತರಿಸಿದ ರೈತ. ಕ್ಷಣ ಯೋಚಿಸಿದ ಗೋಪಿ, 'ಆದರೆ, ಎತ್ತು ಒಂದೆಡೆ ನಿಂತು ತನ್ನ ಗೋಣು ಮಾತ್ರ ಅಲ್ಲಾಡಿಸಿದರೆ?' ಎಂದು ಮರು ಸವಾಲೆಸೆದ. ರೈತ, 'ನಮ್ಮ ಎತ್ತು ವರ್ಕ್ ಫ್ರಂ ಹೋಮ್ ಪದ್ಧತಿಯಲ್ಲಿ ಕೆಲಸ ಮಾಡುವುದಿಲ್ಲ ಸಾರ್!'

**ರಮಣ್ ಶೆಟ್ಟಿ ರೆಂಜಾಳ್**





## ನಾನು ಹೇಗಿದ್ದೀನಿ?

ಕಮಲಾ ಬಹಳ ಬೇಸರದಲ್ಲಿದ್ದಳು. ಅತ್ತೆ, 'ಏನಾಯ್ತು? ಯಾಕೆ ಬೇಸರದಲ್ಲಿದ್ದೀಯಾ' ಎಂದು ಅವಳನ್ನು ಕೇಳಿದಳು. ಅದಕ್ಕೆ ಕಮಲಾ, 'ಅತ್ತೆ, ನೀವೇ ಹೇಳಿ ನಾನು ಕಪ್ಪಗಿದ್ದೀನಾ?' ಎಂದು ಕೇಳಿದಾಗ, ಅತ್ತೆ 'ಇಲ್ಲ' ಎಂದಳು. 'ಮತ್ತೆ ನಾನು ದಪ್ಪಗೆ, ಎಮ್ಮೆ ತರಹ ಇದ್ದೀನಾ? ಗಯ್ಯಾಳಿ ತರಹ ಮಾತಾಡ್ತೀನಾ? ನನ್ನ ಮೂತಿ ಸೊಟ್ಟಗಿದೆಯಾ? ಮೂಗು ಅಸಹ್ಯ ಇದೆಯಾ?' ಎಂದಾಗ ಅತ್ತೆ ಸಮಾಧಾನ ಮಾಡುತ್ತಾ, 'ಇಲ್ವಲ್ಲಮ್ಮ... ಯಾರು ಹಾಗೆ ಹೇಳಿದರು?' ಎಂದರು. ಕಮಲಾ, 'ಮತ್ತೆ, ಪಕ್ಕದ್ಮನೆ ಶಾರದಮ್ಮ ಹೇಳಿದ್ರು, ನೀನು ಥೇಟ್ ನಿನ್ ಅತ್ತೆ ಥರಾನೇ ಇದ್ದೀಯ ಅಂತ!'

**ಸುಧಾ ಎಚ್.ಎಸ್.**

ಕಲೆ: ಗಣೇಶ ಆಚಾರ್ಯ